22.	ಮೈಸೂರು	38–07	765	25 ಎಕರೆ ಜಮೀನಿನಲ್ಲಿ ನರ್ಮ್ ಯೋಜನೆಯಡಿ ಮನೆಗಳನ್ನು ನಿರ್ಮಿಸಲು ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ
23.	ರಾಯಚೂರು	13–07	444	444 ಮನೆಗಳನ್ನು ನಿರ್ಮಿಸಲಾಗಿದೆ
24.	ಶಿವಮೊಗ್ಗ	–	–	
25.	ತುಮಕೂರು	9–26	496	496 ಮನೆಗಳನ್ನು ನಿರ್ಮಿಸಲಾಗಿದೆ
26.	ಉತ್ತರ ಕನ್ನಡ	–	–	
27.	ಉಡುಪಿ	6–00		
	ಒಟ್ಟು ವಿಸ್ತೀರ್ಣ	490–00		

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (492)321
ಸದಸ್ಯರ ಹೆಸರು : ಶ್ರೀ ಎನ್.ಎಲ್.ನರೇಂದ್ರಬಾಬು
ಉತ್ತರಿಸುವ ಸಚಿವರು : (ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ)
: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ) ಏಕರೂಪ ಭಾಷಾನೀತಿ ಜಾರಿಗೊಳಿಸಲು ಸಾಹಿತಿ ಪ್ರೊ : ರಾಜಪ್ಪ ದಳವಾಯಿ ನೇತೃತ್ವದ ತಜ್ಞರ ಸಮಿತಿ ನೀಡಿರುವ ವರದಿ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ; ಇದ್ದಲ್ಲಿ, ಕೈಗೊಂಡ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು);

ಇಲ್ಲ, ರಾಜ್ಯ ಸರ್ಕಾರ ಅಂತಹ ಯಾವುದೇ ಸಮಿತಿಗಳನ್ನು ರಚಿಸಿರುವುದಿಲ್ಲ.

ಆ) ಪ್ರೊ : ರಾಜಪ್ಪ ದಳವಾಯಿ ನೇತೃತ್ವದ ತಜ್ಞರ ಸಮಿತಿ ನೀಡಿರುವ ವರದಿಯಲ್ಲಿನ ಪ್ರಮುಖ ಶಿಫಾರಸ್ಸುಗಳೇನು; ಆ ಶಿಫಾರಸ್ಸುಗಳನ್ನು ಜಾರಿಗೊಳಿಸಲು ಇರುವ ಅಡೆತಡೆಗಳೇನು (ಸಂಪೂರ್ಣ ಮಾಹಿತಿ ನೀಡುವುದು);

ಇ) ಪ್ರೊ : ರಾಜಪ್ಪ ದಳವಾಯಿ ನೇತೃತ್ವದ ತಜ್ಞರ ಸಮಿತಿ ನೀಡಿರುವ ವರದಿಯನ್ನು ಜಾರಿಗೊಳಿಸಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಹಿಂಜರಿಯುತ್ತಿರುವುದು ಏಕೆ; ವರದಿಯಲ್ಲಿ ಭಾಷಾನೀತಿ ಉಲ್ಲಂಘಿಸಲು ನೆರವಾದ ಇಲಾಖೆಯ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲು ಅಗ್ರಹಪಡಿಸಲಾಗಿದೆಯೇ (ಸಂಪೂರ್ಣ ವಿವರ ನೀಡುವುದು);

ಈ) ಸಾಹಿತಿ ಪ್ರೊ : ರಾಜಪ್ಪ ದಳವಾಯಿ ನೇತೃತ್ವದ ತಜ್ಞರ ಸಮಿತಿ ವರದಿ ಸಚಿವ ಸಂಪುಟ ಸಭೆಯ ಮುಂದೆ ಹೋಗಿದೆಯೇ; ಹೋಗದಿದ್ದಲ್ಲಿ, ಸಚಿವ ಸಂಪುಟದ ಮುಂದೆ ತರಿಸಿಕೊಂಡು ಸರ್ಕಾರ ಪರಿಶೀಲಿಸಲು ಕ್ರಮ ಜರುಗಿಸುವುದೇ?

ಪ್ರಶ್ನೆ (ಅ)ಕ್ಕೆ ಉತ್ತರಿಸಿದ ಹಿನ್ನೆಲೆಯಲ್ಲಿ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಚುಕ್ಕೆ ರಹಿತಪ್ರಶ್ನೆ ಸಂಖ್ಯೆ : (436)323
ಸದಸ್ಯರ ಹೆಸರು : ಶ್ರೀ ರಾಜಶೇಖರ ಬಸವರಾಜ ಪಾಟೀಲ್ (ಹುಮ್ನಾಬಾದ್)
ಉತ್ತರಿಸುವ ಸಚಿವರು : (ಶ್ರೀ ಶೋಭಾ ಕರಂದ್ಲಾಜೆ)

ಅ ಹುಮ್ನಾಬಾದ್ ವಿಧಾನಸಭಾ ಕ್ಷೇತ್ರದಲ್ಲಿ ಯಾವ ಯಾವ ಮೂಲಗಳಿಂದ ಕುಡಿಯುವ ನೀರು ಒದಗಿಸಲಾಗುತ್ತಿದೆ; (ಗ್ರಾಮವಾರ ವಿವರ ನೀಡುವುದು)

ಹುಮ್ನಾಬಾದ್ ವಿಧಾನ ಸಭಾ ಕ್ಷೇತ್ರದಲ್ಲಿ ಕೊಳವೆ ಬಾವಿ ಹಾಗೂ ತೆರೆದ ಬಾವಿ ಜಲಮೂಲಗಳಿಂದ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. (ಗ್ರಾಮವಾರು ವಿವರವನ್ನು ಅನುಬಂಧ–1ರಲ್ಲಿ ನೀಡಿದೆ).

ಆ ಈ ಕ್ಷೇತ್ರದಲ್ಲಿ ಎಷ್ಟು ಕಿರು ನೀರು ಸರಬರಾಜು ಯೋಜನೆಗಳಿವೆ; (ವಿವರ ನೀಡುವುದು);

ಹುಮ್ನಾಬಾದ್ ವಿಧಾನ ಸಭಾ ಕ್ಷೇತ್ರದಲ್ಲಿ 90 ಕಿರು ನೀರು ಸರಬರಾಜು ಯೋಜನೆಗಳಿವೆ (ವಿವರ ಲಗತ್ತಿಸಿದೆ).

ಇ ಹಾಗಿದ್ದಲ್ಲಿ ಹೊಸ ಕಿರು ನೀರು ಸರಬರಾಜು ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆಯೇ; (ಗ್ರಾಮವಾರು ವಿವರ ನೀಡುವುದು)?

ಪ್ರಸಕ್ತ ಸಾಲಿನ ಕ್ರಿಯಾ ಯೋಜನೆಯನ್ನು ಜಿಲ್ಲಾ ಪಂಚಾಯತ್ ಸಿದ್ಧಪಡಿಸುತ್ತಿದೆ. ಕ್ರಿಯಾ ಯೋಜನೆ ಅನುಮೋದನೆ ನಂತರ ಗ್ರಾಮವಾರು ವಿವರಗಳು ಲಭ್ಯವಾಗುತ್ತವೆ.

ವಿಧಾನಸಭೆ ಚುಕ್ಕೆರಹಿತ ಪ್ರಶ್ನೆ ಸಂಖ್ಯೆ:436ರ ಲಗತ್ತು ಅನುಬಂಧ–1

ಹುಮ್ನಾಬಾದ್ ವಿಧಾನ ಸಭಾ ಕ್ಷೇತ್ರದಲ್ಲಿ ಕೈಗೊಂಡಿರುವ ಕಿರು ನೀರು ಸರಬರಾಜು ಯೋಜನೆ ಹೊಂದಿರುವ ಗ್ರಾಮಗಳ ವಿವರ

I. ಹುಮ್ನಾಬಾದ್ ತಾಲ್ಲೂಕು:

ಅ) ಕೊಳವೆ ಬಾವಿ ಜಲಮೂಲದ ಗ್ರಾಮಗಳು:

ಬೇನಚಿಂಚೋಳಿ, ಕಬೀರಾಬಾದ್, ನಮದಾಪುರ, ಬೆಳಕೇರಾ, ಮಾಡಗೋಳ, ಶಮತಾಬಾದ, ಚಂದನಹಳ್ಳಿ, ಓತಗಿ, ಹಿಲಾಲಪುರ, ಫೋಡಾವಾಡಿ, ಹಳ್ಳಿಖೇಡ(ಕೆ),